| ಮಹಿಳಾ ಶಿಕ್ಷಕರಿಗೆ 'ಶಿಶುಪಾಲನಾ ರಜೆ' ಮಂಜೂರಾತಿ ನೀಡುವ ಕುರಿತಾದ ಚೆಕ್‌ಲಿಷ್ಟ್ | | |
|---|---|---|
| 1 | ಮಹಿಳಾ ನೌಕರರ ಹೆಸರು | |
| 2 | ಪದನಾಮ | |
| 3 | ಕೆಲಸ ನಿರ್ವಹಿಸುತ್ತಿರುವ ಶಾಲೆಯ ಹೆಸರು | |
| 4 | ಶಿಶುಪಾಲನಾ ರಜೆ ಕೋರಿದ ಅವಧಿ ದಿನಾಂಕ | |
| 5 | ಶಿಶುಪಾಲನೆ ರಜೆ ಕುರಿತು ಮಹಿಳಾ ನೌಕರರು ಅರ್ಜಿ ಸಲ್ಲಿಸಿದ ದಿನಾಂಕ. | |
| 6 | ಇತರೆ ರಜೆಯೊಡನೆ ಹೊಂದಾಣೀಕೆ ಮಾಡಿಕೊಂಡಿದ್ದಲ್ಲಿ ಅದರ ವಿವರ | |
| 7 | ಶಿಶುಪಾಲನೆ ರಜೆ ಕೋರಿರುವ ಮಗುವಿನ ಜನ್ಮ ದಿನಾಂಕ. | |
| 8 | ಮಗುವಿನ ವಯಸ್ಸು:ತಿಂಗಳು | |
| 9 | ಜನನ ಅಥವಾ ಆಧಾರ್ ಕಾರ್ಡ್ ಲಗತ್ತಿಸಿದೆಯೇ..? | |
| 10 | ಯಾವ ದಿನಾಂಕದಿಂದ ಎಲ್ಲಿಯವರೆಗೆ ರಜೆ ಕೋರಿರುತ್ತಾರೆ. | |
| 11 | ಶಿಶುಪಾಲನಾ ರಜೆ ಕೋರಿರುವ ದಿನಗಳ ಸಂಖ್ಯೆ | |
| 12 | ಈಗಾಗಲೇ ಪಡೆದುಕೊಂಡಿರುವ ಶಿಶುಪಾಲನಾ ರಜೆಗಳ ಸಂಖ್ಯೆ | |
| 13 | ಶಿಲ್ಕು ಉಳಿದಿರುವ ಶಿಶುಪಾಲನಾ ರಜೆಗಳ ಸಂಖ್ಯೆ | |
| 14 | ಶಿಶುಪಾಲನಾ ರಜೆ ಅವಧಿಯಲ್ಲಿನ ವಿಳಾಸ. | |
| 15 | ರಜೆ ಅವಧಿಯಲ್ಲಿ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ | |
| 16 | ಶಾಲಾ ಮುಖ್ಯಸ್ಥರ ಶಿಫಾರಸ್ಸು ದಿನಾಂಕ. | |
| 17 | ಶಾಲಾ ಮುಖ್ಯಸ್ಥರ ಅಭಿಪ್ರಾಯ | |
| 18 | ಕ್ಷೇತ್ರ ಶಿಕ್ಷಣಾಧಿಕಾರಿಗಳ ಷರಾ | |
| ಲಗತ್ತಿಸಬೇಕಾದ ದಾಖಲೆಗಳು | | |
| 1 | ಶಾಲಾ ಮುಖ್ಯಸ್ಥರ ಮುಖಪುಟ ಪತ್ರ (ಶಿಫಾರಸ್ಸಿನೊಂದಿಗೆ) | |
| 2 | ಶಿಶುಪಾಲನಾ ರಜೆ ಕುರಿತು ನಿಗದಿಪಡಿಸಿರುವ ಸದರ ಚೆಕ್‌ಲಿಷ್ಟ್ ನಮೂನೆ. | |
| 3 | ಸಂಬಂಧಿಸಿದ ಮಹಿಳಾ ನೌಕರರ ಲಿಖಿತ ಅರ್ಜಿ ಪತ್ರ. | |
| 4 | ಮಗುವಿನ ಜನ್ಮ ದಿನಾಂಕ ತಿಳಿಯಲು ಜನನ ಅಥವಾ ಆಧಾರ್ ಕಾರ್ಡ್ ಫೋಟೋ ಪ್ರತಿ. | |
| ಈ ಮೇಲಿನ ಅಗತ್ಯ ದಾಖಲೆಗಳೊಂದಿಗೆ ಶಿಶುಪಾಲನಾ ರಜೆ ಹೋಗುವವರು 7 ದಿನಗಳ ಪೂರ್ವದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಶಾಲಾ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸಬೇಕು. | | |

ಶಿಶುಪಾಲನಾ ರಜೆ ಪಡೆದುಕೊಳ್ಳುವವರ ರುಜು

ಶಾಲಾ ಮುಖ್ಯಸ್ಥರ ರುಜು ಹಾಗೂ ಮೊಹರು.



Scanned with CamScanner

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ

ಕಬ್ಬನ್ ಉದ್ಯಾನವನ, ಬೆಂಗಳೂರು – 560 001.

ದಿನಾಂಕ: 28-06-2021

ರಾಜ್ಯ ಮಹಿಳಾ ಸರ್ಕಾರಿ ನೌಕರರ ಆದ್ಯ ಗಮನಕ್ಕೆ

## ಶಿಶುಪಾಲನಾ ರಜೆ ಬಗ್ಗೆ ಸ್ಪಷ್ಟನೆ

ಕರ್ನಾಟಕ ರಾಜ್ಯ ಸರ್ಕಾರ ಶಿಶುಪಾಲನಾ ರಜೆ ಬಗ್ಗೆ ಸರ್ಕಾರಿ ಆದೇಶ ಹೊರಡಿಸಿದ್ದು, ರಾಜ್ಯದ ಕೆಲವು ಮಂಜೂರಾತಿ ಪ್ರಾಧಿಕಾರಗಳು ಹಾಗೂ ಮಹಿಳಾ ಶಿಕ್ಷಕರು ಸ್ಪಷ್ಟೀಕರಣ ಕೋರಿರುವುದನ್ನು ಗಮನಿಸಲಾಗಿದೆ. ಹೀಗಾಗಿ ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿದೆ:

- ರಾಜ್ಯ ಸರ್ಕಾರದ ಮಹಿಳಾ ನೌಕರರು ಅವರ ಇಡೀ ಸೇವಾವಧಿಯಲ್ಲಿ ಗರಿಷ್ಠ 06 ತಿಂಗಳವರೆಗೆ ಅಂದರೆ; 180 ದಿನಗಳ "ಶಿಶುಪಾಲನಾ ರಜೆ" ಯನ್ನು ಪಡೆಯಬಹುದಾಗಿದೆ.
- ಮಹಿಳಾ ಸರ್ಕಾರಿ ನೌಕರಳು ಹೊಂದಿರುವ ಮಕ್ಕಳ ಸಂಖ್ಯೆ ಎಷ್ಟು ಇದ್ದರೂ ಸಹ ಶಿಶುಪಾಲನಾ ರಜೆ ಪಡೆಯಲು ಅಡ್ಡಿಯಾಗುವುದಿಲ್ಲ.
- ಅತ್ಯಂತ ಕಿರಿಯ ಮಗುವು 18 ವರ್ಷ ತಲುಪುವವರೆಗಿನ ಅವಧಿಗೆ ಈ ರಜೆ ಸೌಲಭ್ಯ ಪಡೆಯಬಹುದಾಗಿರುತ್ತದೆ.
- ನೌಕರಳ ಸೇವಾ ಪುಸ್ತಕದಲ್ಲಿ ನಮೂದಾಗಿರುವ ಮಕ್ಕಳ ವಯಸ್ಸು ಇತ್ಯಾದಿ ವಿವರಗಳನ್ನು ಪರಿಗಣಿಸಿ ಶಿಶುಪಾಲನಾ ರಜೆಯನ್ನು ಮಂಜೂರು ಮಾಡಬಹುದಾಗಿದೆ.
- ಕನಿಷ್ಠ 15 ದಿನಗಳಿಗಿಂತ ಕಡಿಮೆ ಇಲ್ಲದಂತೆ ಶಿಶುಪಾಲನಾ ರಜೆ ಸೌಲಭ್ಯ ಪಡೆಯಬೇಕು.
- ಹೆರಿಗೆ ರಜೆ ಮತ್ತು ಶಿಶುಪಾಲನಾ ರಜಾ ಸೌಲಭ್ಯಕ್ಕೂ ಒಂದಕ್ಕೊಂದು ಸಂಬಂಧವಿರುವುದಿಲ್ಲ. ಹೆರಿಗೆ ರಜೆಯನ್ನು ಉಪಯೋಗಿಸಿಕೊಂಡ ನೌಕರರೂ ಸಹ ಶಿಶುಪಾಲನಾ ರಜಾ ಸೌಲಭ್ಯವನ್ನು ಪಡೆಯಬಹುದು.
- ಬುದ್ಧಿ ಮಾಂದ್ಯ ಮಕ್ಕಳ ಆರೈಕೆಗೆ ನೀಡಲಾಗುತ್ತಿರುವ ರಜಾ ಸೌಲಭ್ಯವನ್ನು ಪಡೆಯುತ್ತಿರುವ ಮಹಿಳಾ ಸರ್ಕಾರಿ ನೌಕರರು ಈ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುವುದಿಲ್ಲ.
- ಶಿಶುಪಾಲನಾ ರಜಾ ಸೌಲಭ್ಯ ಮಂಜೂರಾತಿ ಆದೇಶವು ದಿನಾಂಕ:21-06-2021 ರಿಂದ ಜಾರಿಗೆ ಬಂದಿರುತ್ತದೆ. ಆದರೆ ಈ ಆದೇಶದ ಹೊರಡಿಸುವ ಮುಂಚೆ 18 ವರ್ಷದೊಳಗಿನ ಮಕ್ಕಳನ್ನು ಹೊಂದಿರುವ ಮಹಿಳಾ ಸರ್ಕಾರಿ ನೌಕರರು ಶಿಶುಪಾಲನಾ ರಜೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.
- ಸಾಂದರ್ಭಿಕ ರಜೆಯನ್ನು ಮಂಜೂರು ಮಾಡುವ ಪ್ರಾಧಿಕಾರವು ಶಿಶುಪಾಲನಾ ರಜೆಯನ್ನು ಮಂಜೂರು ಮಾಡುವ ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ.

(ಸಿ.ಎಸ್.ಷಡಾಕ್ಷರಿ)
ರಾಜ್ಯಾಧ್ಯಕ್ಷರು

: 080-22354784/83 : ksgea.bng@gmail.com : https://www.facebook.com/ksgeaofficial/

Scanned with CamScanner